## 4 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹಳೆಗೊದ್ದನಕೊಪ್ಪ. ಶಿಕಾರಿಪುರ (ತಾ)

**ಹಿನ್ನೆಲೆ :–** ಈ ಶಾಲೆಯು 1943 ರಲ್ಲಿ ಪ್ರಾರಂಭಗೊಂಡಿದೆ. ಶಿಕಾರಿಪರದಿಂದ 5 ಕಿಲೋ ಮೀಟರ್ ದೂರದಲ್ಲಿರುವ ಈ ಶಾಲೆಯು ಸುಮಾರು 20 ವಿದ್ಯಾರ್ಥಿಗಳಿಂದ ಕೇವಲ ಒಂದು ಕೊಠಡಿಯಲ್ಲಿ ಪ್ರಾರಂಭಗೊಂಡು ನಡೆದು ಬಂದಿದೆ. ಈಗ ಎರಡು ಜನ ಶಿಕ್ಷಕರು. ಎರಡು ಕೊಠಡಿಗಳು. 50 ವಿದ್ಯಾರ್ಥಿಗಳಿದ್ದಾರೆ. ಸುತ್ತಲೂ ಹಸಿರು ಪರಿಸರವನ್ನು ಹೊಂದಿದೆ.




**ಭೌತಿಕ ಸೌಲಭ್ಯಗಳು :–** ಸುತ್ತಲೂ ಉತ್ತಮ ಕಾಂಪೌಂಡ್ ಇದೆ. ಎರಡು ಗೇಟ್‌ಗಳಿದ್ದು, ಕಾಮಾನಿನಾಕಾರದ ಕಬ್ಬಿಣದ ಗೇಟ್ ಹೊಂದಿದೆ. ಶದ್ಧ ಕುಡಿಯುವ ನೀರು. ಸ್ವಂತಃ ಬೋರ್ವೆಲ್. ವಿದ್ಯುತ್ ಸೌಲಭ್ಯವನ್ನು ಹೊಂದಿದೆ. ಹನಿ ನೀರಾವರಿ ಜೆಟ್ ಹಾಕಿಸಲಾಗಿದೆ.






**ಆವರಣ :–** ಅನೇಕ ಅಲಂಕಾರಿಕ ಗಿಡಗಳಿಂದ ಕೂಡಿದ ಪಾರ್ಕ ಇದೆ. ಸುತ್ತಲೂ ತ್ಯಾಗದ ಮರಗಳಿವೆ. ಪಾರ್ಕಿನಲ್ಲಿ ಅನೇಕ ತೆಂಗಿನ ಮರಗಳಿವೆ. ಮಾವು, ಹಲಸು, ನೀಲಗಿರಿ, ಪಪಾಯ ಹಣ್ಣಿನ ಗಿಡಗಳಿವೆ.










**ಕಟ್ಟಡಗಳು:–** ಒಂದು R C C ಕಟ್ಟಡವಿದ್ದು. ಇನ್ನೊಂದು ಹೆಂಚಿನ ಕೊಠಡಿಯಿದೆ.

**ಸಸ್ಯವನ :–** ಕೆಲವು ತರಕಾರಿ ಗಿಡಗಳನ್ನು ಬೆಳೆಯಲಾಗುತ್ತಿದೆ. ಔಷಧಿ ಗಿಡಗಳಾದ ತುಲಸಿ, ಶುಂಠಿ, ಇತ್ಯಾದಿಗಳನ್ನು ಬೆಳಸಲಾಗಿದೆ.







**ತರಗತಿ ಕೋಣೆಗಳು:–**ನಲಿಕಲಿ ಹಾಗೂ ಉನ್ನತ ತರಗತಿ ಕೊಠಡಿಗಳು ಉತ್ತಮ ಕಲಿಕಾ ವಾತಾವರಣವನ್ನು ಹೊಂದಿವೆ .





**ಅಕ್ಷರದಾಸೋಹ** :– ಉತ್ತಮವಾದ ಅಡುಗೆ ಕೋಣೆ ಹಾಗೂ ದಾಸ್ತಾನು ಕೋಣೆ ಇದೆ. ಅಡುಗೆಯವರು ದಿನಾಲೂ ಸಮವಸ್ತ್ರದೊಂದಿಗೆ ಅಡುಗೆ ತಯಾರಿ ಹಾಗೂ ಬಡಿಸುವ ಕಾರ್ಯ ಮಾಡುತ್ತಾರೆ.







**ಆಟೋಪಕರಣ, ಪಾಠೋಪಕರಣ ಮತ್ತು ಪೀಠೋಪಕರಣಗಳು :–** ತರಗತಿವಾರು ಹಾಗೂ ವಿಷಯವಾರು ಪಾಠೋಪಕರಣಗಳನ್ನು ಜೋಡಿಸಲಾಗಿದೆ. ಭಾಗಷಃ ಪೀಠೋಪಕರಣಗಳಿವೆ. ಸರಳ ಆಟವಾಡುವಂತಹ ಆಟೋಪಕರಣಗಳನ್ನು ಒದಗಿಸಲಾಗುತ್ತದೆ.

**ಗ್ರಂಥಾಲಯ :–** ಎಲ್ಲಾ ಪುಸ್ತಕಗಳನ್ನು ಪ್ರದರ್ಶನ ಮಾಡಿದ್ದು, ಮಕ್ಕಳೇ ಗ್ರಂಥಾಲಯ ನಿರ್ವಹಣೆ ಮಾಡುತ್ತಿದ್ದಾರೆ. ದಿನಕ್ಕೊಂದು ಪಸ್ತಕ ಓದು ಎನ್ನುವ ಕಲ್ಪನೆಯೊಂದಿಗೆ ಓದುವ ಸಾಮರ್ಥ್ಯ ಸುದಾರಣೆಯಾಗಿದೆ.

**ಪರಿಸರ ಸಂರಕ್ಷಣೆ :–** ಪ್ರತಿ ಕೊಠಡಿಯ ಎದುರು ಒಂದೊಂದು ಡಸ್ಟ್ ಬಿನ್ ಇಟ್ಟು ಕಸವನ್ನು ಸಂಗ್ರಹಿಸಲಾಗುತ್ತಿದೆ ಹಾಗೂ ಪಾರ್ಕ ಮತ್ತು ಮೈದಾನದಲ್ಲಿನ ಕಸವನ್ನು ಸಂಗ್ರಹಿಸಿ ಹಸಿ ಹಾಗೂ ಒಣ ಕಸವನ್ನು ಬೇರ್ಪಡಿಸಿ ಗುಂಡಿಗಳಲ್ಲಿ ಹಾಕಲಾಗುತ್ತದೆ. ಕೊಳೆತ ಮೇಲೆ ಗಿಡಗಳಿಗೆ ಗೊಬ್ಬರವಾಗಿ ಹಾಕಲಾಗುತ್ತದೆ.

ಸಿ ಸಿ ಇ ಆಧಾರಿತ ಬೋಧನೆ ನೆಡೆಯುತ್ತಿದ್ದು, ಮಕ್ಕಳ ಕಲಿಕಾ ಮಟ್ಟಕ್ಕೆ ತಕ್ಕ ಸರಳ ಪ್ರಯೋಗಗಳು ಹಾಗೂ ಪ್ರಾತ್ಯಕ್ಷತೆಗಳ ಮೂಲಕ ಬೋಧನೆ ನಿರ್ವಹಿಸಿಲಾಗುತ್ತಿದೆ. ನಲಿ–ಕಲಿಯಲ್ಲಿ ಸ್ವವೇಗ, ಸ್ವಕಲಿಕೆ, ಸಂತಸದಾಯಕ ಕಲಿಕೆಗೆ ಒತ್ತು ನೀಡಲಾಗಿದೆ. ENGLISH LEARNING ATMOSPHERE SPOKEN ENGLISH IN TO SIMPLE CONVERSATION. ಹೆಚ್ಚಿನ ಒತ್ತು ನೀಡುತ್ತಿದ್ದು, ಇದರಿಂದ ನಮ್ಮ ಶಾಲೆಗೆ ಬೇರೆ ಊರಿನಿಂದಲೂ ಮಕ್ಕಳು ದಾಖಲಾಗುತ್ತಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮಗಳಾದ ಪ್ರತಿಭಾ ಕಾರಂಜಿ ಮತ್ತು ಶಾಲಾ ಸ್ಪರ್ಧೆಗಳಲ್ಲಿ ಮಕ್ಕಳು ಹೆಚ್ಚಿನ ಬಹುಮಾನಗಳನ್ನು ಪಡೆದು ತಾಲೂಕು ಮಟ್ಟಕ್ಕೆ ಸ್ಪರ್ಧಿಸಿದ್ದಾರೆ. ಮಕ್ಕಳ ಕಲಿಕೆಗೆ ಅನುಗುಣವಾದಂತಹ ಹೊರ ಸಂಚಾರವನ್ನು ನಡೆಸಲಾಗುತ್ತದೆ. ಉತ್ತಮ ಕಲಿಕಾ ವಾತಾವರಣದಿಂದಾಗಿ ವರ್ಷದಿಂದ ವರ್ಷಕ್ಕೆ ಶಾಲೆಯ ಫಲಿತಾಂಶದಲ್ಲಿ ಭಾರಿ ಪ್ರಗತಿಕಂಡು ಬರುತ್ತಿದೆ. ಕೆ ಎಸ್ ಕ್ಯು ಎ ಎ ಸಿ ಪರೀಕ್ಷೆಯಲ್ಲೂ ಅತ್ಯಂತ ಹೆಚ್ಚಿನ ಫಲಿತಾಂಶ ಬಂದಿರುತ್ತದೆ. ಶಾಲೆಯಲ್ಲಿಎಲ್ಲಾ ಸಂಘಗಳನ್ನು ನಿರ್ವಹಿಸಿದ್ದು ಅದರ ರೀತಿಯೇ ಮಕ್ಕಳು ಕಾರ್ಯ ನಿರ್ವಹಿಸುತ್ತಾರೆ.

**ಸಮವಸ್ತ್ರ :–** ಶಾಲೆಯಲ್ಲಿ ಪ್ರತಿ ದಿನವೂ ಬೇರೆ ಬೇರೆ ಬಣ್ಣದ ಸಮವಸ್ತ್ರವನ್ನು ನಿರ್ವಹಿಸಲಾಗಿದೆ. ಟೈ, ಬೆಲ್ಟ್ ಮತು್ತ ಐಡಿ ಕಾರ್ಡನ್ನು, ಶೂ ಹಾಗೂ ಸಾಕ್ಸ್ ಧರಿಸುವುದು ಸಾಮಾನ್ಯವಾಗಿದೆ.



